# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 381/2020 ಸಿಡಬ್ಲೂ: 4 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 19-06-2025

ಹೆಸರು : ಸಾಬಣ್ಣ

ತಂದೆ ಹೆಸರು : ಶರಣಪ್ಪ ಹೊಸಮನಿ

ವಯಸ್ಸು : 32 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಕೊಡ್ಲಾ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿ ಪಿ 2 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಮಾಡಿದ್ದಾರೆ. ಸದರಿ ಪಂಚನಾಮೆ 25-06-2020 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆಯ ವರೆಗೆ ಮಾಡಿದ್ದಾರೆ. ಸದರಿ ಪಂಚನಾಮೆಯ ಸಮಯದಲ್ಲಿ ಒಂದು ಮೋಟಾರು ಸೈಕಲ್ ನಂ. ಎಪಿ 22 ಎ ಆರ್ 0667 ನೇದ್ದನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಚಾ ಸಾ 5 ರವರು ಸಹ ಹಾಜರಿದ್ದರು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ಪಂಚನಾಮೆಯನ್ನು ಯಾರು ಹೇಳಿ ಬರೆಸಿಲ್ಲ, ಸಾಕ್ಷಿಯು ಮುಂದುವರೆದು ನಾವೇ ಖುದ್ದಾಗಿ ಘಟನಾ ಸ್ಥಳಕ್ಕೆ ಹೋಗಿ ನಾವೇ ಬರೆದೆವು ಎಂದು ನುಡಿಯುತ್ತಾರೆ. ಪೊಲೀಸರು ನಾವು ಪಂಚನಾಮೆ ಜರುಗಿಸಿದ್ದೆವು ನೀವು ಸಹಿ ಮಾಡಿರಿ ಅಂತಾ ಕೇಳಿದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸಮಕ್ಷಮ ವಾಹನವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಾಹನ ಕೆರೆ ಪಕ್ಕದಲ್ಲಿರುವ ಕೋಡ್ಲಾ-ಸೇಡಂ ರಸ್ತೆಯ ಎಡಭಾಗಕ್ಕೆ ಬಿದಿತ್ತು. ಸದರಿ ವಾಹನಕ್ಕೆ ಏನು ಆಗಿತ್ತು ನಾನು ನೋಡಿಲ್ಲ. ನಾನು ಮತ್ತು ಚಾ ಸಾ 1 ರವರ ಒಂದೇ ಗ್ರಾಮದವರು ಎಂದರೆ ಸರಿ. ಚಾ ಸಾ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಿಲ್ಲ. ಪೋಲೀಸರು ನನ್ನ ಹಾಗೂ ಚಾ ಸಾ 5 ರವರ ಸಮಕ್ಷಮ ಪಂಚನಾಮೆ ಮಾಡಿದರ ಬಗ್ಗೆ ಸುಳ್ಳು ಮಾಡಿದರ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಪಂಚನಾಮೆಗೆ ವೃತ್ತ ನಿರೀಕ್ಷಕರಾದ ಚಾಸಾ 14 ಹಾಗೂ ಇಬ್ಬರು ಪೊಲೀಸರು ಬಂದಿದ್ದರು. ಅದೇ ರೀತಿ ಪೊಲೀಸರು ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಕೆರೆಯ ಹತ್ತಿರ ಆಗಿರುತ್ತದೆ. ಸೇಡಂ ದಿಂದ ಕೋಡ್ಲಾ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಕೆರೆಯ ಹತ್ತಿರ ಇರುತ್ತದೆ ಎಂದರೆ ಸಾಕ್ಷಿಯು ಮುಂದು ಇರುತ್ತದೆ ಅಪಘಾತ ತಿರುವು ಮುಂದೆ ಇರುತ್ತದೆ ಎಂದು ನುಡಿಯುತ್ತಾರೆ. ತಿರುವುನಿಂದಅಪಘಾತ ಸ್ಥಳ 100 ರಿಂದ 120 ಮಿಟರು ಇರಬಹುದು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**